



ಅಘನಾಶಿನಿ ದಡದಲ್ಲಿ ನಿಂತು ಅರಬ್ಬಿ ಕಡೆಗೆ ದೃಷ್ಟಿ ಹಾಯಿಸಿದಾಗ ಕಾಣುವ ಲೈಟ್‌ಹೌಸ್ ಗುಡ್ಡ



ಕಾಗಾಲ್ ಗುಡ್ಡದ ಮೇಲೆ ನಿಂತು ಕಣ್ಣಾಡಿಸಿದಾಗ ಕಾಣುವ ಅಘನಾಶಿನಿಯ ಹಿನ್ನೀರಿನ ರಮಣೀಯ ದೃಶ್ಯ

ಸಂದರ್ಭಗಳಲ್ಲೊಂದು! ಅಘನಾಶಿನಿಯ ತಟದಿಂದ ಮತ್ತೊಂದು ತಟದಲ್ಲಿರುವ ತದಡಿಗೆ ತೆರಳಲು ಬಾರ್ಜ್ ವ್ಯವಸ್ಥೆಯಿದೆ. ಅದರ ಮೇಲೆ ಕೂತು ಅವಳ ಮಡಿಲಲ್ಲಿ ತೇಲುತ್ತ ಹೋಗುವುದು ರೋಮಾಂಚಕ ಅನುಭವ. ಅಲ್ಲಿಂದ ಗೋಕರ್ಣ ಕೇವಲ ಆರು ಕಿ.ಮೀ. ದೂರ. ಅಘನಾಶಿನಿಯಿಂದಲೇ ಓಂ ಬೀಚ್, ಕುಡ್ಲೆ ಬೀಚ್, ಬಾಡ ಬೀಚ್, ಹಿನ್ನೀರಲ್ಲಿ ಇರುವ ಕಾಂಡ್ಲಾವನಕ್ಕೂ ತೆರಳಬಹುದು. ಅದಕ್ಕಾಗಿಯೇ ಪ್ರವಾಸಿ ಬೋಟ್‌ಗಳೂ ಇವೆ.

ಅಘನಾಶಿನಿ ಅಂಚಲ್ಲಿಯೇ ರಾತ್ರಿ ಕಳೆಯಬೇಕು ಎಂದರೆ ಹೋಂ ಸ್ಟೇಗಳಿವೆ, ರೆಸಾರ್ಟ್ಸ್‌ಗಳೂ ಇವೆ. ಅಲ್ಲಿರುವ ಪ್ರತಿ ಮನೆಯೂ ಪ್ರಕೃತಿ ಚಿತ್ತಾರದ ಮಮತೆಯ ಗುಡಿ. ಗುಡ್ಡದ ಮೇಲಿನ ನೋಟ, ಜಗದಾತೀತ ಅನುಭವ. ಮಳೆಗಾಲದಲ್ಲಿ ಊರ ನೆತ್ತಿಯ ಮೇಲಿರುವ ಗುಡ್ಡದ ತುದಿಯಲ್ಲಿ ನಿಂತು ಕಣ್ಣಾಡಿಸಿದರೆ, ಒಂದೇ ದೃಷ್ಟಿಗೆ ಅರಬ್ಬಿಯ ರೌದ್ರರೂಪ, ಅಘನಾಶಿನಿಯ ಅಬ್ಬರದ ಹರಿವು ಮೈ ಬೆವರುವಂತೆ ಮಾಡುತ್ತದೆ. ಕಾಡು, ಗುಡ್ಡ, ಬೆಟ್ಟ, ತೆಂಗು, ಅಡಿಕೆ ತೋಟ ಸ್ಥಳೀಯರ ವಾಸಸ್ಥಾನದಲ್ಲಿರುವ ಮೃದುವಾದ ಮೌನ. ಇವು ಅಘನಾಶಿನಿಯ ಉಸಿರಿನಂತೆಯೇ ಭಾವ ತುಂಬಿರುವ ಸ್ಥಳಗಳು...

ಬೆಳಿಗ್ಗೆ ಐದರಿಂದ ಏಳು, ಸಂಜೆ ಐದರಿಂದ ಸೂರ್ಯಾಸ್ತದವರೆಗೆ ಇಲ್ಲಿಯ ಪ್ರಕೃತಿ, ತನ್ನ ಜೀವದ ಕಲರವ ತೋರಿಸುವ ಪವಿತ್ರ ಕಾಲಮಾನ. ಹುಣ್ಣಿಮೆ ಬಂತೆಂದರೆ, ಅದು ಅಘನಾಶಿನಿಯ ಹೃದಯದ ಮೇಲೆ ಚಂದ್ರಮನು ತನ್ನ ಪ್ರೀತಿಯ ಮುದ್ರೆ ಹಾಕುವ ಯೋಗದ ಕ್ಷಣ.

ಅಘನಾಶಿನಿ ಪೌರಾಣಿಕ ಸ್ಥಳವೂ ಹೌದು. ಅಗಸ್ತ್ಯ ಮುನಿ ಅಲ್ಲಿ ತಪಸ್ಸು ಮಾಡಿದ್ದಕ್ಕಾಗಿ ಅಘನಾಶಿನಿ ಹೆಸರು ಬಂದಿದೆ ಎನ್ನುವುದು ಪ್ರತೀತಿ. ಸಾಕ್ಷಿಯಾಗಿ ಅಗಸ್ತ್ಯ ಗುಹೆಯೂ ಅಲ್ಲಿದೆ. ಒಂದು ಕಡೆ ಗುಡ್ಡ–ಬೆಟ್ಟ–ಗದ್ದೆಗಳ ಸಾಲು, ಇನ್ನೊಂದು ಕಡೆ ಅರಬ್ಬಿಯ ಭೋರ್ಗರೆತ, ಮತ್ತೊಂದು ಕಡೆ ನದಿ ಹರಿವು... ತ್ರಿಮೂರ್ತಿ ರೂಪದಲ್ಲಿ ಕಾಣುವ



ನದಿಯ ಹಿನ್ನೀರಿನ ತಟದಿಂದ ಕಾಣುವ ಹಸಿರಿನ ಸೊಬಗು

ಪ್ರಕೃತಿಯೇ ಮೈದಳೆದಂತಹ ಸ್ಥಳ ಈ ಅಘನಾಶಿನಿ. ಒಮ್ಮೆ ಬಂದರೆ ಮತ್ತೆ ಬರಲೇಬೇಕು ಎಂದೆನಿಸುವ, ಸದಾ ಕಾಡುತ್ತಲೇ ಇರುವ ತಾಣ. ಪ್ರಕೃತಿಯೇ ಕೋಗಿಲೆಯಂತೆ ಹಾಡಿ ಮನಸಲ್ಲಿ ತಿಲ್ಲಾನ ಮೂಡಿಸಿ ಮುದ ನೀಡುವ ಊರು.

ಅಘನಾಶಿನಿ ಕೇವಲ ನದಿಯಲ್ಲ, ಊರೂ ಅಲ್ಲ. ಪ್ರಕೃತಿಯ ಹೃದಯದಲ್ಲಿ ಬಚ್ಚಿಟ್ಟುಕೊಂಡಿರುವ ಮೃದುವಾದ ನಾದ–ಲಯಗಳ ಸಮ್ಮಿಳಿತದ ಉಸಿರು... ■

ಅಘನಾಶಿನಿ ನದಿ ಅರಬ್ಬಿ ಸಮುದ್ರದಲ್ಲಿ ಸಂಗಮವಾಗುವ ಅನತಿ ದೂರದ ತಟ

